## ಪುರಾಣೋಕ್ತ ನಾರದರ ಮಹಿಮೆ ಹಾಗೂ ಶ್ರೀ ಪುರಂದರದಾಸರ ಮಹಿಮೆ ಪ್ರತಿಪಾದಿಸುವ ಶ್ರೀ ಗುರುಪುರಂದರ ದಾಸರ ಎರಡು ಕೃತಿಗಳು

ಮನ್ಮನೋಭೀಷ್ಟವರದಂ ಸರ್ವಾಭೀಷ್ಟಫಲಪ್ರದಂ ।
ಪುರಂದರಗುರುಂ ವಂದೇ ದಾಸಶ್ರೇಷ್ಠಂ ದಯಾನಿಧಿಂ ॥

ಆರಾಧನೆ ಪುಷ್ಯ ಮಾಸದ ಅಮಾವಾಸ್ಯೆ

### ಪುರಾಣೋಕ್ತ ನಾರದರ ಮಹಿಮೆ

ಶ್ರೀಗರುಡ ಪುರಾಣ ಬ್ರಹ್ಮಕಾಂಡದ ಅಧ್ಯಾಯ 32ರಲ್ಲಿ ಶ್ರೀಕೃಷ್ಣ ಹಾಗೂ ಗರುಡ ಸಂವಾದದಲ್ಲಿ ನಾರದ ಶಬ್ದದ ಅರ್ಥವು ಈ ರೀತಿ ಹೇಳಲ್ಪಟ್ಟಿದೆ –

ಶ್ರೀಕೃಷ್ಣನು ಹೇಳುತ್ತಾನೆ – ಜ್ಞಾನಿಗಳು ನಾರದ ಶಬ್ದವನ್ನು ಮುಂದಿನಂತೆ ನಿರ್ವಚಿಸುತ್ತಾರೆ – ನರ ಸಂಬಂಧಿಯಾದುದು ಜ್ಞಾನ, ಇದನ್ನು ಯೋಗ್ಯಜೀವರಿಗೆ ನಿತ್ಯದಲ್ಲಿಯೂ ನೀಡುವುದರಿಂದ ಬ್ರಹ್ಮಪುತ್ರನಾದ ಈ ಮಹಾತ್ಮನು ನಾರದರೆಂಬ ಹೆಸರನ್ನು ಎಲೈ ಗರುಡನೇ ಹೊಂದಿದ್ದಾನೆ.

ಶ್ರೀ ಕೃಷ್ಣ ಉವಾಚ :
ನರಸಂಬಂಧಾತ್ ಜ್ಞಾನಮಾಹುರ್ಮಹಾಂತೋ
ಯೋಗ್ಯಸ್ಯ ಜೀವಸ್ಯ ದದಾತಿ ನಿತ್ಯಮ್ ॥ 2 ॥
ಅತೋ ಹ್ಯಸೌ ಬ್ರಹ್ಮಪುತ್ರೋ ಮಹಾತ್ಮಾ
ಸಂಜ್ಞಾಂ ವೀಂದ್ರ ನಾರದೇತಿ ಹ್ಯವಾಪ ॥ 3 ॥

ನಾರದ ಶಬ್ದಾರ್ಥವನ್ನು ನಿರ್ವಚನ ಮಾಡಿದ ಈ ಅಧ್ಯಾಯದಲ್ಲಿಯೇ ಮುಂದೆ ಶ್ಲೋಕ ನಾರದರು ವಿಷ್ಣುವಿನ ಇಪ್ಪತ್ತು ನಾಮಗಳನ್ನು ಸಂಕೀರ್ತನೆ ಮಾಡಿದಾಗ ನರಕದಲ್ಲಿದ್ದ ಯೋಗ್ಯಜೀವರೆಲ್ಲ ವಿಷ್ಣುವಿನ ನಾಮವನ್ನು ಕೇಳುವ ಮಾತ್ರದಿಂದ ನರಕದಿಂದ ಮುಕ್ತರಾದರು ಎಂದಿದೆ.

ಏಕೈಕನಾಮಾಽಪಿ ಚ ಪಾಪಸಂಘಾನ್ ದಹೇದ್ಧಿ ವೈ ಭಕ್ತಿಪೂರ್ವಂ ಸ್ಮೃತಂ ಹಿ ।
ನಾಮ್ನಾಂ ವಿಷ್ಣೋರ್ಗರಣಂ ನೈವ ಪುಂಸಾ ಸಮಸ್ತತೀರ್ಥೈರ್ಬಹುಭಿರ್ವ್ರತೈಶ್ಚ ಕಿಮ್ ॥ 16 ॥
ಸರ್ವತ್ರ ದೇಶೇ ಸರ್ವಕಾಲೇಷು ತೇಷಾಮಮಂಗಲಂ ನಾಸ್ತಿ ನಾಸ್ತ್ಯೇವ ನಿತ್ಯಂ ॥
ಸರ್ವಾಣಿ ನಾಮಾನಿ ಚ ಯೌಗಿಕಾನಿ ಗೂಢಾನಿ ವಿಷ್ಣೋಃ ಪಠಿತಾನಿ ವೇದೈಃ ॥ 17 ॥
ತಾನ್ಯೇವ ನಾಮಾನಿ ಗೃಹ್ಣಾತಿ ಚಾತ್ರ ಸಂಮೋಚಿತುಂ ಯಮಪಾಶಾಚ್ಚ ಪಾಪಾತ್ ।
ಏವಮೇವ ಹಿ ಶಬ್ದಾಶ್ಚ ಪ್ರಸಿದ್ಧಿರಪಿ ಲೌಕಿಕೀ ॥ 18 ॥
ವಾಚಕತ್ವಂ ಪ್ರಧಾನಸ್ಯ ತ್ವಿತರಸ್ಯ ತದನ್ವಯಾತ್ ।
ವಿಷ್ಣಾವೇವ ಪ್ರಸಿದ್ಧಾನಿ ನಾಮಾನ್ಯೇವ ಹ್ಯಗಾಯತ ॥ 19 ॥
ನೃಸಿಂಹ ನಾರಾಯಣ ವಾಸುದೇವ ಗೋವಿಂದ ವಿಷ್ಣೋಽಚ್ಯುತ ಮಾಧವೇತಿ ।
ಹರೇ ಮುಕುಂದ ಶ್ರೀಧರ ಶ್ರೀನಿವಾಸ ದಾಮೋದರಃ ಪದ್ಮನಾಭೋ ವಟುಶ್ಚ ॥ 20 ॥

ಕೂರ್ಮೋ ಝುಷಃ ಶಿಂಶುಮಾರೋ ವರಾಹೋ ಧನ್ವಂತರಿಃ ಕೃಷ್ಣರಾಮಸ್ತು ಕೃಷ್ಣಃ।
ನಾಮಾನಿ ವಿಷ್ಣೋಶ್ಚ ಪ್ರಗಾಯಮಾನೇ ವಿಂಶಚ್ಚ ಸಂಖ್ಯಾನಿ ಮುನೀಶ್ವರೇಣ ॥ 21 ॥
ಶ್ರುತ್ವಾ ಚ ಸರ್ವೇ ನಾರಕೇ ಪಚ್ಯಮಾನಾ ಮುಕ್ತಾ ಯಯುರ್ಮಂದಿರಂ ವೈ ಮುರಾರೇಃ॥

ಮಾಹಾತ್ಮ್ಯಪೂರ್ವಕವಾದ ಸುದೃಢಭಕ್ತಿಯಿಂದ ಕೂಡಿ ಉಚ್ಚರಿಸಿದ ಒಂದೊಂದು ಭಗವಂತನ ನಾಮವೂ ಪಾಪಸಮೂಹವನ್ನೇ ನಾಶಗೊಳಿಸುತ್ತಾದ್ದರಿಂದ ಅನ್ಯತೀರ್ಥ,ವ್ರತಾದಿಗಳಿಂದೇನು, ಭಗವಂತನ ನಾಮೋಚ್ಚಾರಣೆ ಮಾಡುವವರಿಗೆ ಎಲ್ಲಾ ದೇಶಕಾಲಗಳೂ ಪವಿತ್ರವೇ ಅವರಿಗೆ ಅಮಂಗಳವಿಲ್ಲ. ನಾರದರಾದರೋ ವೇದದಲ್ಲಿ ಹೇಳಲ್ಪಟ್ಟ ಯೌಗಿಕ ಹಾಗೂ ರಹಸ್ಯವಾದ, ವಿಷ್ಣುವನ್ನು ಹೊರತು ಪಡಿಸಿ ಅನ್ಯರಿಗೆ ಅನ್ವಯ ಮಾಡಿ ಹೇಳಲು ಅಶಕ್ಯವಾದ ಅವನನ್ನು ಮಾತ್ರ ಹೇಳುತ್ತಿರುವ, ಇದರಂತೆಯೇ ಲೋಕದಲ್ಲಿಯೂ ಪ್ರಸಿದ್ಧವಾದ ವಿಷ್ಣುವಿನ ನಾಮಗಳನ್ನು ಗಾನಮಾಡಿದರು. 1) ನೃಸಿಂಹ, 2) ನಾರಾಯಣ, 3) ವಾಸುದೇವ, 4) ಗೋವಿಂದ, 5) ಅಚ್ಯುತನಾದ ವಿಷ್ಣುವೇ, 6) ಮಾಧವ, 7) ಹರೇ ಮುಕುಂದ, 8) ಶ್ರೀಧರ, 9) ಶ್ರೀನಿವಾಸ, 10) ದಾಮೋದರ, 11) ಪದ್ಮನಾಭ, 12) ವಾಮನ, 13) ಕೂರ್ಮ, 14) ಮತ್ಸ್ಯ, 15) ಶಿಂಶುಮಾರ, 16) ವರಾಹ, 17) ಧನ್ವಂತರಿ, 18) ಕೃಷ್ಣ 19) ರಾಮ, 20) ವೇದವ್ಯಾಸ, ಎಂಬುದಾಗಿ ಮುನೀಶ್ವರರಾದ ನಾರದರಿಂದ ವಿಷ್ಣುವಿನ ಇಪ್ಪತ್ತು ನಾಮಗಳು ಗಾನಮಾಡಲ್ಪಡುತ್ತಿರಲು, ನರಕದಲ್ಲಿ ಬೇಯುತ್ತಿರುವ ಯೋಗ್ಯಜೀವರು ಪಾಪಮುಕ್ತರಾಗಿ ಹರಿಮಂದಿರವನ್ನು ಹೊಂದಿದರು.

ಈ ಪುರಾಣೋಕ್ತವಾದ ನಾರದರ ಮಹಾತ್ಮೆಯನ್ನೇ ಶ್ರೀವಿಜಯರಾಯರು ಶ್ರೀಪುರಂದರ ದಾಸರ ಜೀವನ ಚಿತ್ರಣವನ್ನು ನೀಡುವ - ಬ್ಯಾಸರಾದೆ ಸೂಸಿ ಭಜಿಸಿರೋ ಪುರಂದರ। ದಾಸರಾಯರಾ ॥ ಎಂದು ಆರಂಭವಾಗುವ ತಮ್ಮ ಕೃತಿಯ ಕೊನೆಯ ನುಡಿಯಲ್ಲಿ ಮುಂದಿನಂತೆ ನಿರೂಪಿಸಿದ್ದಾರೆ.

ಘೋರ ನರಕಾದೊಳಗೆ ಬಿದ್ದಾ।ಪಾರ ಜನರೂ
ಚೀರುತಿರಲು।ದ್ಧಾರ ಮಾಡಿದ **ನಾರದಾರಿವರೂ** ॥
ಪಾಮರರ ಪಾಲಿಸೆ। ಧಾರುಣಿಯೊಳವತಾರ ಮಾಡಿದರೂ ॥
ಹರಿಸರ್ವೋತ್ತಮನೆಂ।ದ್ವಾರಂತೆ ಧರೆಯೊಳಗೆ ಬೀರಿದರೂ ॥
ಹೀಂಗೆನುತ ತಿಳಿಯಲು। ಮಾರಜನಕಾ ವಿಜಯವಿಠ್ಠಲ।
ಯಾರಿಗಾದರು ಒಲಿವ ಕಾಣಿರೋ ॥ 9 ॥

★★★★★

## ಶ್ರೀ ಪುರಂದರದಾಸರ ಮಹಿಮೆಯನ್ನು ಪ್ರತಿಪಾದಿಸುವ ಶ್ರೀ ಗುರುಪುರಂದರ ದಾಸರ ಎರಡು ಕೃತಿಗಳು

**ಕೃತಿ 1 :** ದಾಸರ ಚರಿತ್ರೆಯನ್ನು ಕೇಳುವುದರಿಂದ ಸಾವಿರ ಜನ್ಮಗಳ ಪಾಪಪರಿಹಾರವಾಗುವುದು, ಇದಕ್ಕೆ ಬೇಕಾದರೆ ಹರಿವ ಹಾವನ್ನೇ ಹಿಡಿದು ಶಪಥಮಾಡುವೆ ಎಂದು ಪ್ರತಿಜ್ಞೆಮಾಡಿ ದಾಸರ ಚರಿತ್ರೆಯನ್ನು ಪ್ರಾರಂಭದ ಪಲ್ಲವಿಯಲ್ಲಿ ತಿಳಿಸುತ್ತಿದ್ದಾರೆ.

ನುಡಿ 1 - ಪುರಂದರ ಪಟ್ಟಣದೊಳಗೆ ಆಗರ್ಭಶ್ರೀಮಂತರಾದ ವಿಠ್ಠಲ ಹಾಗು ರುಕ್ಮಿಣಿ ಎಂಬ ದಂಪತಿಗಳಿಗೆ ಪುರಂದರನೆಂಬ ಪುತ್ರನಾದನು, ನುಡಿ 2 - ಆ ಮಗನಿಗೆ ಮದುವೆ ಮುಂಜಿಗಳನ್ನು ಮಾಡಿದಾಗ, ಪುರಂದರರು ಹರಿಭಕ್ತಿಯಿಂದ ಕೂಡಿ ತಮ್ಮ ತಂದೆತಾಯಿ ಮಾಡುತ್ತಿದ್ದರು,

ನುಡಿ 3, 4, 5, 6 – ಕುಲದ ಪದ್ಧತಿಯಂತೆ ಉದ್ಯೋಗ ಮಾಡು ಎಂದು ಚಿನ್ನದ ನಾಣ್ಯಗಳನ್ನು ನೀಡಲು ಆದನ್ನು ಬ್ರಾಹ್ಮಣರಿಗೆ ನೀಡಿದರು,ಹೀಗೆ ಮೂರ್‍ನಾಲ್ಕು ಬಾರಿಯಾದಾಗ, ಇವರನ್ನು ಕಟ್ಟಿ ವಿಠ್ಠಲನ ಗುಡಿಯಲ್ಲಿಟ್ಟು ಬಾಗಿಲನ್ನು ಹಾಕಿದಾಗ, ಭಗವಂತನ ಧ್ಯಾನರತರಾದರು, ಇದನ್ನು ಕಂಡ ಹರಿಯು ಲಕ್ಷ್ಮಿಗೆ ಹೇಳಿ ಚಿನ್ನದ ತಟ್ಟೆಯಲ್ಲಿ ಭೋಜನವನ್ನು ತಂದು ನೀಡಿದಾಗ, ಗಂಗೆ ಮೊದಲಾದ ನದಿ ಅಭಿಮಾನಿ ದೇವತೆಗಳು ಕೈಗೆ ನೀರನ್ನು ನೀಡಿದರು, ಪುರಂದರರು ಹರಿನೈವೇದ್ಯವಾಗದ್ದನ್ನು ಉಣ್ಣುವುದಿಲ್ಲ ಎಂದರು, ಆಗ ಶ್ರೀಭೂದುರ್ಗಾಸಹಿತನಾಗಿ ಶ್ರೀಹರಿಯು ಭೋಜನಮಾಡಿ, ತಾನೇ ಕರುಣೆಯಿಂದ ದಾಸರಿಗೆ ಉಣ್ಣಿಸಿದನು ಮತ್ತು ನೀನು ಮಾಡಿದ ಪದವೆಲ್ಲ ಶಾಸ್ತ್ರವೇ ಆಗಲಿ ಎಂದು ವರವಿತ್ತನು.

ನುಡಿ 7 – ಪುರಂದರರ ನೆಂಟರೆಲ್ಲ ಎಂಟು ದಿನವಾಯ್ತಲ್ಲ ಇವರು ಜೀವಂತ ಇರುವರೋ ಇಲ್ಲವೋ ಎಂಬುದನ್ನು ಪರೀಕ್ಷಿಸಲು ದೇವಸ್ಥಾನದ ಬಳಿ ಬಂದು ದಾಸರು ದೇವರ ಧ್ಯಾನದಲ್ಲಿರುವುದನ್ನು ಕಂಡರು. ಸುತ್ತಮುತ್ತ ಇದ್ದ ರತ್ನಖಚಿತವಾದ ಪಾತ್ರೆಗಳನ್ನು ಕಂಡು ಇನ್ನು ನಾವು ನಿನ್ನ ತಂಟೆಗೇ ಬರುವುದಿಲ್ಲ ಎಂದರು.

ನುಡಿ 9, 10 – ಪುರಂದರರು ತಮ್ಮ ಪತ್ನಿಯನ್ನು ಪರೀಕ್ಷಿಸಲು ಚಿನ್ನದ ನಾಣ್ಯಗಳನ್ನು ನೀಡಿದಾಗ ಆಕೆ ಆದನ್ನು ಬ್ರಾಹ್ಮಣರಿಗೆ ದಾನಮಾಡಿದರು, ನಂತರ ಪತ್ನಿಸಮೇತರಾಗಿ ಪಂಡರಪುರಕೆ ನಡೆದರು, ಅಲ್ಲಿಂದ ಅಪ್ಪಣ ಹಾಗೂ ಪರಶುರಾಮ ಭಾಗವತರೆಂಬ ಶಿಷ್ಯರೊಡನೆ ಶ್ರೀವ್ಯಾಸರಾಯರ ಬಳಿ ಬಂದು ನಮಸ್ಕರಿಸಿದಾಗ, ನಿನಗೆ ಶ್ರೀಹರಿಯೇ ಉಪದೇಶಮಾಡಿದ್ದಾನಲ್ಲ ಎಂದು ಅವರು ಹೇಳಲು, ನಿಮ್ಮಿಂದಲೇ ಮುದ್ರೆ, ಮಂತ್ರಾದಿಗಳ ಉಪದೇಶವಾಗಲಿ ಎಂದು ಅವುಗಳನ್ನು ಪಡೆದು ಜ್ಞಾನ ವೈರಾಗ್ಯ ಭಕ್ತಿಯಿಂದ ಕೂಡಿದವರಾಗಿ, ಶ್ರೇಷ್ಠವಾದ ವಿಜಯನಗರದಲ್ಲಿ ಒಡೆಯನಾದ ಗುರುಪುರಂದರವಿಠಲನ ಪಾದ ಸ್ಮರಿಸುತ್ತಾ, ನಿತ್ಯದಲ್ಲೂ ಹರಿದಾಸರಾಗಿ ಮೆರೆಯುತ್ತಿದ್ದಾರೆ ಎಂಬುದಾಗಿ ಈ ಕೃತಿಯು ಮುಕ್ತಾಯವಾಗುತ್ತದೆ.

ರಾಗ : ನಾಟಿ ತಾಳ : ಝಂಪೆತಾಳ

ದಾಸರು ಜನುಮ ಪಡೆದ ವಿಸ್ತಾರವನೆ ಕೇಳಿ ।
ಲೇಸಾಗಿ ಭಕುತಿಯಿಂದೆಲ್ಲ ನೀವು ।
ಸಾಸಿರ ಜನ್ಮದ ಪಾಪ ಭಸ್ಮಾಗುವುದು ।
ಪುಶಿಯಲ್ಲ ಹರಿವ ಹಾವನ್ನೆ ಪಿಡಿವೆ ॥ ಪಲ್ಲವಿ ॥
ಏಸು ಜನುಮದ ಪುಣ್ಯ ಮಾಡಿದರೆ ದೊರಕದು ।
ದೋಷುಳ್ಳ ನರರಿಗೆ ದೊರಕೊಂಬುದೆ ।
ವಸುಧೆಲಿ ಇವರಂತೆ ಹಿಂದೆ ಮುಂದೂ ಇಲ್ಲ ।
ವಾಸುದೇವನೆ ಬಲ್ಲ ಇವರ ಮಹಿಮೆಗಳಾ ॥ ಅನುಪಲ್ಲವಿ ॥
ಸೃಷ್ಟಿಯೊಳು ಪುರಂದರಪಟ್ಟಣದೊಳಗೊಬ್ಬ ।
ವಿಠ್ಠಲನೆಂಬ ಚಿನಿವಾರನಿರಲಾತನಿಗೆ ।
ಪಟ್ಟದರಾಣಿ ಆಕೆಯ ಪೆಸರು ರುಕ್ಮಿಣಿಯು ।
ಇಷ್ಟಳಾಗಿಹಳು ಅತಿಸಿರಿಯಿಂದಲಿ ॥
ಪಟ್ಟೆ ಧನಧಾನ್ಯ ಕೋಟ್ಯಧಿಕದಿಂದೆಸೆಯುತಿರೆ ।
ಅಷ್ಟದಿಕ್ಕಿಲಿ ದ್ರವ್ಯ ಮೆರವುತಿರಲು ।
ಅಷ್ಟರೊಳಗವರ ಬಲುಪೊಟ್ಟೆಯಲಿ ಪುಟ್ಟಿದರು ।

ಇಷ್ಟನಾದ ಪುರಂದರನೆಂಬ ಪುತ್ರ || 1 ||
ಪುರಂದರವೆಂಬ ಪಟ್ಟಣದಲ್ಲಿ ವಿಠ್ಠಲನೆಂಬ ಚಿನಿವಾರನಿಗೆ
ಮುಂಜಿಮದುವೆಯ ಮಾಡಿ ಮಮತೆಯಿಂದಲಿ ಇವರ।
ಪಂಜರದ ಗಿಳಿಯಂತೆ ಸಲಹುತಿರಲು।
ಕಂಜನಾಭನ ಪಾದಕಂಜವನೆ ಧೇನಿಸುತ।
ಕುಂಜರನ ಪರಿಯಲ್ಲಿ ಮೆರಯುತಿರಲು ॥
ಅಂಜಿ ಹಿರಿಯರ ಪಾದಕಂಜಸೇವೆಯ ಮಾಡಿ।
ಅಂಜನೆಯ ತನಯನೆ ಗತಿಯೆನ್ನುತಿರಲು।
ಕಂಜಮುಖಿಯಳ ಕೂಡಿ ಹರಿಭಕ್ತಿಯುಳ್ಳವರ।
ಪುಂಜದೊಳಗೆ ಪರವಶರಾಗಿ ಇಹರು || 2 ||
ಒಂದು ದಿನದಲಿ ಮಗನ ಕರದು ಕೂಡಿಸಿಕೊಂಡು।
ಚಂದದಲಿ ಹರುಷಪೂರಿತನಾದ ಪಿತನು।
ಒಂದೆರಡು ಸಾವಿರ ಹೊನ್ನುಗಳ ತಂದಿತ್ತು।
ಇಂದಿನಿಂದುದ್ಯೋಗ ಮಾಡೆಂದನು ॥
ಅಂದ ಮಾತನು ಕೇಳಿ ವಳಿತೆಂದು ತಲೆದೂಗಿ।
ಕಂದರ್ಪನಯ್ಯನ ಮನದಿ ಧೇನಿಸುತ।
ಚಂದದಿಂ ಹೊಗಳಿ ಮುದದಿಂದ ಬ್ರಾಹ್ಮರ ಕರೆದು।
ಕುಂದದಲೆ ಆ ದ್ರವ್ಯವನೆ ಕೊಟ್ಟರು || 3 ||
ಹೀಗೆ ನಾಲಕು ಬಾರಿ ಮಾಡೆ ಎಲ್ಲರು ಬಂದು।
ಹ್ಯಾಂಗೆ ಉದ್ಯೋಗವಿದು ಪೇಳೆನ್ನುತ।
ಬ್ಯಾಗಿವರನೊಯ್ದು ಶ್ರೀವಿಠ್ಠಲನ ಗುಡಿಯೊಳಗೆ।
ಹಗ್ಗದಲಿ ಕಟ್ಟಿವರ ಪರಿಯರಿಯದೆ ॥
ಬಾಗಲಿಕ್ಕಿದರು ಆಗೇಳು ದಿನಗಳು ಅಲ್ಲಿ।
ಯೋಗಿಜನಗಳ ತೆರದಿ ಧೇನಿಪರು ಹರಿಯ।
ರಾಗಭಕುತಿಯ ನೋಡಿ ಕ್ಷೀರಸಾಗರಶಯನ।
ಆಗ ಹರುಷಿತನಾಗಿ ಸಿರಿಗೆ ಪೇಳ್ದ || 4 ||
ರಂಗುಮಾಣಿಕ ಬಿಗಿದು ಬಂಗಾರದಧ್ದರಿವಾಣ।
ಶೃಂಗಾರವಾಗಿ ಥಳಥಳನೆ ಪೊಳೆಯೆ।
ಅಂಗನೆ ಸಿರಿದೇವಿ ಮಾಡಿ ಷಡುರಸದನ್ನ।
ರಂಗನ ಬಳಿ ಹರಿವಾಣದಲಿ ತರಲು ॥
ತುಂಗದೃಷ್ಟಿಯ ಹರಿ ಶುಭಾಂಗದಾಸರ ದಿವ್ಯ।
ಅಂಗವನು ನ್ಯಾವರಿಸಿ ಊಟ ಮಾಡೆನಲು।
ಕಂಗಳಿಂ ನೋಡಲಳವಲ್ಲ ಥಾಲಿಗಳಲ್ಲಿ।

ಗಂಗೆ ಮೊದಲಾದವರು ನೀರಿತ್ತರು ॥ 5 ॥
ಏನು ಮಾಡಿದರುಣಲೊಲ್ಲದೆ ಘನಮಹಿಮ ।
ನೀನುಂಡುದನ್ನವುಂಬುವೆನೆಂದರು ।
ದೀನರಕ್ಷಕ ಭೂಮಿದುರ್ಗೆಯರ ಸಹಿತಾಗಿ ।
ತಾನುಂಡುದುಚ್ಚಿಷ್ಟವನ್ನೆ ಪಿಡಿದು ॥
ನೀನೂಟಮಾಡೆಂದು ಹರುಷಪ್ರಸನ್ನನು ।
ತಾನೆ ಉಣಿಸಿದನು ಕಾರುಣ್ಯದಿಂದ ।
ನೀನು ಮಾಡಿದ ಪದವು ಶಾಸ್ತ್ರಸಮ್ಮ ।
ತವಾಗಲೆನ್ನುತಲಿ ಆಗಲೇ ವರವಿತ್ತನು ॥ 6 ॥
ಅಷ್ಟದಿವಸಾದ ಮೇಲಷ್ಟು ಮಂದಿಯ ।
ಕೂಡಿ ಕೊಟ್ಟನೋ ಪ್ರಾಣವನು ಎಂದು ಬಾಗಿಲನು ।
ವಿಠ್ಠಲನ ಗುಡಿ ಪೊಕ್ಕು ತೆರದು ನೋಡುತಲಿರಲು ।
ಅಷ್ಟದಿಕ್ಕಲಿ ಪೊಳೆವ ಹರಿವಾಣವ ॥
ದಿಟ್ಟಿಸಿ ನೋಡಲಾಗುಡಿಯೊಳಗೆ ದಾಸರು ।
ವಿಠ್ಠಲನ ಪದಧ್ಯಾನದಲಿ ಮಗ್ನರಿರಲು ।
ಬಟ್ಟಲು ಚಂಬುಗಳು ರತ್ನ ಖಚಿತಾದುದನು ।
ಮುಟ್ಟಿ ನೋಡಾಶ್ಚರ್ಯಗೊಂಡರಾಗ ॥ 7 ॥
ತಂದೆತಾಯಿ ಬಂಧು ಬಳಗವೆಲ್ಲವು ಬಂದು ।
ಕಂದ ನಿನ್ಹೆಸರು ಕೊಂಬುವುದಿಲ್ಲವೆನುತ ।
ಚಂದವಾಗದ್ಹರಿವಾಣಚಂಬುಥಾಳಿಗಳ ಕೋ ।
ಎಂದು ಕೈಯಲಿ ಕೊಟ್ಟು ನಡಿ ಎಂದರು ॥
ಮಂದಗಮನೆಯೆ ಮೊದಲಾದ ಮಂದಿಗಳು ಕರ ।
ತಂದು ಮಂದಿರದೊಳಗೆ ಆದರಿಸಲು ।
ಅಂದದಿಂ ಬ್ರಾಹ್ಮಣರ ಕರೆದು ಆ ಹರಿವಾಣ ।
ನಂದದಿಂದಲಿ ಕೊಟ್ಟು ನಲಿದರಾಗ ॥ 8 ॥
ಹೆಂಡತಿಯ ಮನಸು ನೋಡುವೆನೆಂದು ಆಕೆಯನೆ ।
ಕಂಡು ಹಿಡಿತುಂಬ ಹೊನ್ನುಗಳ ಕೊಡಲು ।
ಹಿಂಡು ಬ್ರಾಹ್ಮಣರ ಕರತಂದು ಕೂಡಿಸಿ ಬ್ಯಾಗ ।
ಕಂಡಕಂಡಂತೆ ದಾನವನಿತ್ತಳು ॥
ತಂಡತಂಡದಿ ಜನರು ನೋಡುತಿರೆ ನಾಯಕರು ।
ಹೆಂಡತಿಯ ಕರತಂದು ಪಂಡರಾಪುರಕೆ ।
ಪುಂಡಲಿಕವರದನ ಸೇವಿಸುತಲಾಜ್ಞೆಯನು ।
ಕೊಂಡು ಮುದದಿಂದ ಹಂಪಿಗೆ ಬಂದರು ॥ 9 ॥

ಅಪ್ಪಣ್ಣ ಭಾಗವತ ಪರಶುರಾಮ ಭಾಗವತೆಂಬ ।
ಒಪ್ಪುವ ಶಿಷ್ಯಯುಗ ಸಂಗಡದಿ ಇರಲು ।
ಆ ಪಟ್ಟಣದಿ ವ್ಯಾಸರಾಯರೆಂಬುವ ಯತಿಯು ।
ತಪಸಿಗಳ ಗುರುವಾಗಿ ಮೆರೆಯುತಿಹರು ॥
ಅಪರಾಧಿ ನಾನೆಂದು ಇವರು ನಮನವ ಮಾಡೆ ।
ಅಪಹಾಸಮಾಡದಲೆ ದಾಸರನೆ ಕಂಡು ।
ಉಪದೇಶ ನಿನಗಾಯಿತೋ ಇಲ್ಲೋ ಎಂದೆನಲು ।
ತಪಸಿಗುರುವಿನ ದಯೆಯೆ ಬೇಕೆಂದರು ॥ 10 ॥
ನುಡಿಯುತಲಿ ದಾಸರು ಅಡಿಗಡಿಗೆ ಎರಗುತಲಿ ।
ಬಿಡದೆ ಮುದ್ರಾಮಂತ್ರದುಪದೇಶವ ।
ತಡಿಯದೆಲೆ ಕೊಂಡು ವೈರಾಗ್ಯಭಕುತಿಯ ತಾಳಿ ।
ಕಡಿದು ದುರಿತಾಳಿಗಳನೆಚ್ಚತ್ತರು ॥
ಪೊಡವಿಯಲಿ ವರವಿಜಯನಗರದಲಿ ಮೆರೆಯುತಿಹ ।
ಒಡೆಯ ಗುರುಪುರಂದರವಿಠ್ಠಲನಚರಣ ।
ದೃಢಮನಸಿನಿಂದಲಿ ಸ್ಮರಿಸುತ್ತ ಗುರುಪಾದ ।
ಸಡಗರದಿ ನಿತ್ಯದಲಿ ಮೆರೆಯುತಿಹರು ॥ 11 ॥

**ಕೃತಿ 2 :** ಈ ಕೃತಿಯಲ್ಲಿ ಶ್ರೀಪುರಂದರ ದಾಸರ ಮಗಳು, ತನಗೆ ತವರು ಮನೆಯಲ್ಲಿ ಹರಿದಾಸರಾದ ನೀವು ಬಡವರು, ಎಂದು ಹೀಯಾಳಿಸಿಕೊಂಡು, ಆ ಮಾತನ್ನು ತನ್ನ ತಂದೆಯಾದ ಪುರಂದರದಾಸರ ಮುಂದೆ ಆಡಿದಾಗ, ಅವರು ನಿಜವಾದ ಮಾತನ್ನೇ ಆಡಿದ್ದಾರೆ, ನಾನು ಹರಿಭಕ್ತರಲ್ಲಿ ಬೇಡಿ, ಅದನ್ನೇ ಹರಿಗರ್ಪಿಸಿ, ನೀನು ಕೊಟ್ಟ ಪ್ರಸಾದವೆಂದು ತಿನ್ನುವವ, ಅದಕ್ಕೆ ಬೇಸರ ಪಟ್ಟುಕೊಳ್ಳಬೇಡಮ್ಮ ಎಂದು ಸಮಾಧಾನಿಸಿ, ಅಂದು ಧ್ಯಾನಸ್ಥರಾದಾಗ, ಶ್ರೀಹರಿಯೇ ತನ್ನ ದಾಸರಾದ ಇಂದ್ರ ಹಾಗೂ ಕುಬೇರನ್ನ ಕರೆಸಿ ದಾಸರ ಮನೆಯಲ್ಲಿ ಔತಣವಿದೆ ಎಂಬುದಾಗಿ ಎಲ್ಲರಿಗೂ ಆಹ್ವಾನವನ್ನು ನೀಡಿ, ಆ ಬೀಗರಾದಿಯಾಗಿ ಸಮಸ್ತರಿಗೂ ಜನ್ಮದಲ್ಲಿಯೇ ಮರೆಯಲಾಗದ ಔತಣವನ್ನು ಮಾಡಿಸಿ, ಶ್ರೀಹರಿಯು ತನ್ನ ಭಕ್ತರಲ್ಲಿ ಮಾಡುವ ಉಪಕಾರವನ್ನು ವರ್ಣಿಸಿ ಜೊತೆಗೆ ಹರಿಭಕ್ತರ ಮಹಿಮೆಯನ್ನು ಸಹ ಈ ಕೃತಿಯಲ್ಲಿ ವರ್ಣಿಸಲಾಗಿದೆ. ಕೆಲವು ಪದಗಳ ಅರ್ಥ: ನುಡಿ 1 ಕಕ್ಷಿಯೆನಗೊಬ್ಬರಲ್ಲ = ನನ್ನ ಸಮಾನರು ಯಾರಿಲ್ಲ ಎಂಬ ಭಾವ, ನುಡಿ 5 ಪ್ರಸ್ಥ = ಸಮಾರಂಭ ಅಥವಾ ಔತಣ, ನುಡಿ 6 ಆಯತಾಗಿರಿ = ಸಿದ್ದವಾಗಿರಿ, ಸ್ವಸ್ಥವಾಗಿರಿ, ಔತಣಕ್ಕೆ ಹೇಳಿದ್ದರಿಂದ ಬಂದಾಗ, ಯಾವುದೇ ಔತಣದ ಸಿದ್ಧತೆಯನ್ನು ಕಾಣದೆ, ಮನದಲ್ಲಿ ಕಳವಳಗೊಳ್ಳಬೇಡಿ ಎಂಬ ಭಾವವು. ನುಡಿ 8 ಸಮೆಯ ದೀವಿಗೆ = ಜೋಡು ದೀಪಗಳು, ನುಡಿ 10 ಹೊಡೆ ಹೊರಳುತಿಹನು = ಕಾಲಿಗೆ ಬಿದ್ದು ಪದೇ ಪದೇ ಬೇಡುವಿಕೆ

ರಾಗ : ಶಂಕರಾಭರಣ ತಾಳ : ಝಂಪೆತಾಳ

ತಿಳಿಯದು ಜನರಿಗೆ ಜ್ಞಾನಿಗಳ ಮಹಿಮೆ ।
ನಳಿನನಾಭನ ದಾಸಜನರ ಬೆಡಗು ॥ ಪಲ್ಲವಿ ॥

ಲಕ್ಷ್ಮಿ ಒಲಿಯಲಲ್ಪಗರುವದಿ ಮೆರೆಯುವರು ।
ಲಕ್ಷ್ಯಮಾಡರು ಗುರುಹಿರಿಯರನ್ನು ।
ಕಕ್ಷಿಯೆನಗೊಬ್ಬರಲ್ಲೆಂತೆಂದು ತಿರುಗಿ ಉ ।
ಪೇಕ್ಷೆಯಿಂದಲಿ ಲಂಪಟದಿ ತೊಳಲುತಿಹರು ॥ 1 ॥
ದಾಸರ ಬೀಗನು ರೋಷದಿಂ ಮನೆಯೊಳಗೆ ।
ಸೊಸಿಯನ್ನೆ ಕರೆದು ಪರಿಹಾಸ್ಯದಿಂದ ।
ದೇಶದೇಶವ ತಿರುಗಿ ಅನ್ನವನೆ ಕಾಣದ ।
ದಾಸನ ಮನೆಯೂಟ ಬಹಳದಿನವಾಯ್ತೆಂದಾ ॥ 2 ॥
ತಂದೆ ಬಳಿಯಲಿ ಬಂದು ಮಗಳು ಪೇಳಿದಳು ಆ ।
ತಂದ ಮಾತುಗಳೆಲ್ಲ ಒಂದು ಬಿಡದೆ ।
ಹೊಂದಿ ಬಡತನದಲ್ಲಿ ಇದ್ದದು ಅವರಿಗೆ ।
ಅಂದವಾಗಿದೆ ಎಂತೆಂದು ಪೇಳಿದರು ॥ 3 ॥
ಪುತ್ರಿಯ ಮುನಿಸನು ಮತ್ತೆ ಮನದಲಿ ತಿಳಿದು ।
ಸತ್ಯವಾಡಿದರಿದು ಪುಶಿಯಲ್ಲವು ।
ವ್ಯರ್ಥ ನೀ ಚಿಂತೆ ಮಾಡುವದ್ಯಾಕೆ ವಳಿತೆಂದು ।
ನಿತ್ಯ ನಾ ಮಾಡುವ ಕೃತ್ಯ ಕಂಡಾಡಿದರು ॥ 4 ॥
ಧ್ಯಾನದಲಿ ಕುಳ್ಳಿರೆ ಅರಿಕೆಯಿಲ್ಲದ ಹಾಗೆ ।
ದಾನವಾಂತಕರಂಗ ಸಡಗರದಿ ಅಂದು ।
ಅನುವಾಗಿ ಇಂದ್ರಕುಬೇರನ್ನ ಕರೆಸಿ ಇಂ ।
ದಿನ ದಾಸರ ಮನೆ ಪ್ರಸ್ಥ ಸಾಗಿಸಿರೆಂದಾ ॥ 5 ॥
ಹರಿಯಾಜ್ಞೆಯನೆ ಕೇಳಿ ಹರುಷದಿಂದುಭಯರು ।
ಪುರದ ಜನರಿಗೆ ಔತಣವನೆ ಪೇಳೆ ।
ಪುರಂದರದಾಸರ ಮನೆಗೆ ಬಾಹೋದೆಂದು ।
ತ್ವರಿತದಿಂದಲಿ ಬಂದು ಆಯತಾಗಿರಿ ಎನಲು ॥ 6 ॥
ಏನು ಸೋಜಿಗವಿದು ದಾಸರ ಮನೆ ಪ್ರಸ್ಥ ।
ಮುನ್ನೆ ನೈವೇದ್ಯದ ಚಿಹ್ನೆಯಿಲ್ಲ ।
ದಿನ ಹೊತ್ತು ಬಹಳಾಗೆ ಕ್ಷುಧಿಗೆ ತಾಳದೆ ಬಲು ।
ಅನುಮಾನದಿಂದ ಮನೆಗೆ ತಾಕುತಿಹರು ॥ 7 ॥
ಹನ್ನೊಂದು ತಾಸಿಗೆ ಸಕಲಪಾಕಗಳಾಗೆ ।
ಚೆನ್ನಾಗಿ ತಾವು ಸರ್ವರನೆ ಕುಳ್ಳಿರಿಸಿ ।
ಮುನ್ನೆ ಸಾಲು ಸಮೆಯ ದೀವಿಗೆಗಳನಿಟ್ಟು ।
ಚನ್ನಸಕ್ಕರೆ ತುಪ್ಪದಿಂದ ಕೈ ತೊಳೆದರು ॥ 8 ॥
ಬೀಗನಿಂದಲಿ ಸಹಿತ ಮನೆಮಂದಿಗಳಿಗೆಲ್ಲ ।
ಆಗಲೇ ದಿವ್ಯವಸ್ತ್ರಗಳ ಕೊಟ್ಟು ।

ಹೋಗಿಬನ್ನಿರಿ ಬಹಳ ತಡವಾಯಿತು ಎಂದು ।
ಬ್ಯಾಗನೇ ಹರಿಯ ಸನ್ನಿಧಿಯಲ್ಲಿ ನಿಲ್ಲೋರು ॥ 9 ॥
ನೋಡುತಿರೆ ಮಹಿಮೆಯನು ನೆರದ ಜನರೆಲ್ಲರು ।
ಕಡಲಶಯನನ ದಾಸರಾಭಾಗ್ಯವ ।
ಆಡಿದ ಮಾತಿಗೆ ಅಪರಾಧವಾಯ್ತೆಂದು ।
ಪಿಡಿದು ಚರಣಗಳನ್ನು ಹೊಡೆಹೊರಳುತಿಹನು ॥ 10 ॥
ನುಡಿವರು ದಾಸರು ಏನು ಅರಿಯೆವು ಎಂದು ।
ಬಡವನಗೆ ಒಬ್ಬರ ಗೊಡವ್ಯಾತಕೆ ।
ಪೊಡವಿಗೊಡಿಯ ಗುರುಪುರಂದರವಿಠ್ಠಲನು ।
ಮಾಡುವ ಚರಿತೆ ತಾನೊಬ್ಬ ಬಲ್ಲಾ ॥ 11 ॥

ಶ್ರೀಮಧ್ವೇಶಾರ್ಪಣಮಸ್ತು

– ಸಂಗ್ರಹ : ಯಲಮೇಲಿ ಪುಷ್ಪಹಾಸ ಬಾಲಕೃಷ್ಣ
ಬೆಂಗಳೂರು